




# ಕಳೆಗುಂದಿದ ತಾರಾಲೋಕ



**ಅವರಿಗೆ ಮಾತು ಕೇವಲ ನಾಲಗೆಯಿಂದ ಬರುತ್ತಿರಲಿಲ್ಲ, ನಾಭಿಯಿಂದ ಹೊರಟು ಕೈ ಬೆರಳ ತುದಿಯಲ್ಲಿ ಆಡುತ್ತಿತ್ತು!**

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಅನಂತಮೂರ್ತಿ ವಿಧಿವಶರಾಗಿದ್ದಾರೆ. ಅವರನ್ನು ಹತ್ತಿರದಿಂದ ಬಲ್ಲವರಿಗೆ ಅನಿಸಿದ್ದ ಸಂಗತಿ ಏನೆಂದರೆ ಸಾವು ಅವರನ್ನು ಕಂಡರೆ ಭಯ ಪಡುತ್ತಿತ್ತು ಎಂಬುದು. ದೇಹದ ಅಂಗಾಂಗಗಳು ಒಂದೊಂದಾಗಿ ಕುಸಿಯತೊಡಗಿ ಹಲವು ವರ್ಷಗಳೇ ಆಗಿದ್ದರೂ ಅವರ ಮನಸ್ಸು ಮಾತ್ರ ಎಳೆಯ ಪ್ರಾಯದಲ್ಲಿಯೇ ಇತ್ತು. ಅಪರೂಪ ಎನಿಸುವ ನೆನಪಿನ ಶಕ್ತಿ, ಆ ಲವಲವಿಕೆ, ಸಮಾಜದ ಬಗ್ಗೆ ಕಟ್ಟೆಚ್ಚರ, ಸಾಹಿತ್ಯ ಲೋಕದ ಮೆಲುಕುಗಳು, ಸಮಕಾಲೀನ ಕಿರಿಯ ಬರಹಗಾರರಿಗೆ ಸ್ನೇಹಪೂರ್ವಕ ಬೆಂಬಲ, ರಾಜಕಾರಣದ ಕಟು ವಿಮರ್ಶೆ– ಎಲ್ಲವೂ ತಮ್ಮ ಉತ್ಕಟಾವಸ್ಥೆಯಲ್ಲಿಯೇ ಪ್ರಕಟಗೊಳ್ಳುತ್ತಿದ್ದವು. ತೀವ್ರವಾಗಿ ಭಾವಿಸುವುದು ಒಬ್ಬ ಒಳ್ಳೆಯ ಲೇಖಕನ ಗುಣ. ಅವರಿಗೆ ಮಾತು ಕೇವಲ ನಾಲಗೆಯಿಂದ ಬರುತ್ತಿರಲಿಲ್ಲ, ನಾಭಿಯಿಂದ ಹೊರಟು ಕೈ ಬೆರಳ ತುದಿಯಲ್ಲಿ ಆಡುತ್ತಿತ್ತು. ಅವರ ದೇಹ ಭಾಷೆಯನ್ನು ಗಮನಿಸಿದವರಿಗೆ ಅದು ಮನವರಿಕೆಯಾಗುತ್ತಿತ್ತು.

1971 ರಲ್ಲಿ ಬೂಸಾ ಚಳವಳಿ ತಾರಕಕ್ಕೇರಿತ್ತು. ನಾನಾಗ ಮೊದಲ ಬಿ.ಕಾಂ. ವಿದಾರ್ಥಿ. ಮೈಸೂರಿನ ಟೌನ್ ಹಾಲಿನಲ್ಲಿ ಬಸವಲಿಂಗಪ್ಪನವರನ್ನು ಸಮರ್ಥಿಸಿಕೊಳ್ಳುವ ಇವರ ಭಾಷಣ ದಲಿತ ಚಳವಳಿಯ ಹುಟ್ಟಿಗೆ ನಾಂದಿ ಹಾಡುವಂತಿತ್ತು. ಮೊದಲ ಬಾರಿಗೆ ಅವರನ್ನು ನೋಡಿದ, ಕೇಳಿದ ನನಗೆ ಅವರೊಬ್ಬ ಸ್ಫೂರ್ತಿದಾಯಕ ಸಾಹಿತಿಯಾಗಿ ಕಂಡರು. ಆ ಐತಿಹಾಸಿಕ ಹೋರಾಟಕ್ಕೆ ಕುವೆಂಪು ನೈತಿಕ ಬೆಂಬಲ ಸೂಚಿಸಿದರು, ಅನಂತಮೂರ್ತಿ ಅವರೊಡನೆ ದನಿಗೂಡಿಸಿದರು. ಕರ್ನಾಟಕದ ಸಾಂಸ್ಕೃತಿಕ ಪಲ್ಲಟಕ್ಕೆ ಇವರು ಹೆಗಲೆಣೆಯಾಗಿ ನಿಂತರು ಎಂದರೆ ಅತಿಶಯೋಕ್ತಿಯಾಗಲಾರದು. ಆಗಲೇ ನಾನು ಅವರನ್ನು ಓದಲು ಶುರು ಮಾಡಿದ್ದು.

'ಸಂಸ್ಕಾರ'ದಂತಹ ಕಾದಂಬರಿ ಬರೆಯುವಾಗಲೇ ಅವರೊಳಗೊಬ್ಬ 'ಕ್ರಿಟಿಕಲ್ ಇನ್‌ಸೈಡರ್' ಹುಟ್ಟಿಕೊಂಡಿದ್ದ. ಅವನು ಕಡೆಯವರೆಗೂ ಎಚ್ಚರವಾಗಿದ್ದ. ಯಾರ ಹಂಗೂ ಇಲ್ಲದೆ, ಯಾರಿಗೂ ಭಯ ಪಡದೆ ತನ್ನ ನಿಲುವುಗಳನ್ನು ಪ್ರಕಟಿಸುತ್ತಿದ್ದ. ಅವರನ್ನು ಎತ್ತರಕ್ಕೇರಿಸಿದ ಇನ್ನೊಂದು ಗುಣವೆಂದರೆ, ಅವರು ಸಮಾಜದ ಕಟ್ಟಕಡೆಯ ಮನುಷ್ಯನೊಂದಿಗೆ ಗುರುತಿಸಿಕೊಳ್ಳುತ್ತಿದ್ದುದು. ಅಸ್ಪೃಶ್ಯತೆ ಈ ಸಮಾಜಕ್ಕಂಟಿದ ಮಹಾ ಕಳಂಕ ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ಆದರೆ ಜಾತಿ ಪದ್ಧತಿಯನ್ನು ಕುರಿತು ಸ್ವಲ್ಪ ಮೃದುವಾಗಿದ್ದರು ಎಂದೇ ಹೇಳಬೇಕು. ಅದು ಅಂದಿನ ಸಾಮಾಜಿಕ ಅನಿವಾರ್ಯವಾಗಿತ್ತು, ಅದರಿಂದ ಅಧಿಕಾರ ವಿಕೇಂದ್ರೀಕರಣ ಸಾಧ್ಯವಾಗಿತ್ತು ಎಂದು ಅವರು ನಂಬಿದ್ದರು. 'ಅದು ಅಧಿಕಾರ ಮತ್ತು ಶ್ರಮದ ಅಸಮಾನ ವಿಭಜನೆ. ಅದರಿಂದಾದ ಅನಾಹುತಗಳೇ ಹೆಚ್ಚು. ಮುಂದೆಯೂ ಅದು ಕಂಟಕವೇ' ಎಂದು ನಾನು ವಾದಿಸುತ್ತಿದ್ದೆ. ಆದರೆ 'ಅದರ ಅಗತ್ಯ ಈಗ ಇಲ್ಲ' ಎಂದು ಅವರು ಹೇಳುತ್ತಿದ್ದರು. ಅವರ ಈ ಮಾತುಗಳಿಗೆ ಗಾಂಧಿಯೇ ಪ್ರೇರಣೆ ಎಂಬುದರಲ್ಲಿ ಸಂಶಯವಿಲ್ಲ.

ಪ್ರಖರ ವೈಚಾರಿಕರಾಗಿದ್ದ ಅವರು ಯಾವುದೇ ವಿಷಯವಾಗಲಿ, ಕೂದಲು ಸೀಳುವ ವಿಶ್ಲೇಷಣೆಯಿಂದ ಎಲ್ಲರನ್ನೂ ತಲೆ ತೂಗುವಂತೆ ಮಾಡುತ್ತಿದ್ದರು. ಅನಂತಮೂರ್ತಿಯವರಲ್ಲಿ ಸ್ವಲ್ಪ ಮಾತ್ರ ಅಪ್ರಾಮಾಣಿಕತೆಯ ನೆರಳು ಕಂಡರೂ ಗೆಳೆಯ ಲಂಕೇಶ್ ತಕ್ಷಣ ಸಿಡಿದು ಬೀಳುತ್ತಿದ್ದರು. ಅಂತಹ ಅನೇಕ ಸಂದರ್ಭಗಳಿಗೆ ನಾನು ಸಾಕ್ಷಿಯಾಗಿದ್ದಿದೆ.

36 ನೇ ಪುಟ ನೋಡಿ

